

# ಪಿಂಗಾಣಿ ಪುಷ್ಪ!

ಚಿತ್ರ- ಲೇಖನ:
**ಮಂಜುನಾಥ ಡಿ.ಎಸ್**





ದಪ್ಪ ಹಾಗೂ ಮೇಣದಂತೆ ನುಣುಪಾದ ಬಿಳಿ ದಳಗಳಿಂದಾಗಿ ಈ ಪುಟ್ಟ ಹೂವಿಗೆ ಪಿಂಗಾಣಿ ಪುಷ್ಪ ಎಂಬ ಹೆಸರು ಬಂದಿದೆ. ಕಾಂಡದಿಂದ ಹೊರಹೊಮ್ಮಿ ಬಿಡಿಸಿದ ಛತ್ರಿಯಂತೆ ಕಂಗೊಳಿಸುವ ಹೂಗಳಲ್ಲಿ ನಕ್ಷತ್ರಾಕಾರದ ಎರಡು ಪದರಗಳಿರುತ್ತವೆ. ಈ ಎರಡು ಪದರಗಳ ನಡುವೆ ಮಧ್ಯದಲ್ಲಿ ಕೆಂಗಂದು ಬಣ್ಣದ ಚಿತ್ತಾರವಿರುತ್ತದೆ. ಮಧುರ ಪರಿಮಳ ಸೂಸುವ ಹೂಗಳಲ್ಲಿ ಯಥೇಚ್ಛ ಮಕರಂದವಿರುತ್ತದೆ.

ವೈಜ್ಞಾನಿಕವಾಗಿ ಎಪೊಸಿನಾಸಿಯೇ ಕುಟುಂಬಕ್ಕೆ ಸೇರಿದ ಈ ಸಸ್ಯ ವೈಜ್ಞಾನಿಕವಾಗಿ ಹೋಯ್ ಕಾರ್ನೋಸ ಎಂದು ಕರೆಯಲ್ಪಡುತ್ತದೆ. ಉಷ್ಣವಲಯದಲ್ಲಿ ಬಳ್ಳಿ ಅಥವಾ ಪೊದೆಯಂತೆ ಬೆಳೆಯುವ ಈ ಸರ್ವಋತು ಸಸ್ಯ ಆಸ್ಟ್ರೇಲಿಯ, ಚೀನಾ ಮತ್ತು ಥಾಯ್ಲೆಂಡ್‌ಗಳಲ್ಲಿ ಕಂಡುಬರುತ್ತದೆ. ರಾಬರ್ಟ್ ಬ್ರೌನ್ ತನ್ನ ಸಸ್ಯಶಾಸ್ತ್ರಜ್ಞ ಗೆಳೆಯ ಥಾಮಸ್ ಹೋಯ್ ಗೌರವಾರ್ಥ ಈ ಸಸ್ಯಕ್ಕೆ ಹೋಯ್ ಎಂದು ನಾಮಕರಣ ಮಾಡಿದರು. ಇದಕ್ಕೆ ಮದಂಗಿಯ, ಮಿಕೊಲಿಟ್ಜಿಯ, ಹನಿ ಪ್ಲಾಂಟ್, ವ್ಯಾಕ್ಸ್ ಪ್ಲಾಂಟ್ ಹೀಗೆ ಹಲವು ಹೆಸರುಗಳು ಇವೆ.

ಈ ಸಸ್ಯಕ್ಕೆ ಗಾಳಿಯನ್ನು ಸ್ವಚ್ಛಗೊಳಿಸುವ ಗುಣವಿದೆಯೆಂದು ಹೇಳಲಾಗುತ್ತದೆ. ಇದರ ಔಷಧೀಯ ಗುಣಗಳ ಬಗ್ಗೆ ಮಾಹಿತಿ ವಿರಳ. ಹೋಯ್ ಹೂ ಅಲಂಕಾರಿಕ ಪುಷ್ಪವಾಗಿ ಬಳಸಲ್ಪಡುತ್ತದೆ.